ಬಡವಾಗಿದೆ ಮಳೆಗಾಲ. ರಾಜ್ಯ ರಾಜಕಾರಣದಲ್ಲೀಗ ಕೊಳೆಗಾಲ. ಇಂಥ ವಿರೋಧಾಭಾಸದ ಸಂದರ್ಭದಲ್ಲಿ ಶ್ರಾವಣ ಅಡಿಯಿಡುತ್ತಿದೆ. ಎಂಥ ದುಸ್ತರ ಸಂದರ್ಭದಲ್ಲೂ ಬದುಕಿನ ಬಂಡಿ ಮುಂದೆ ಸಾಗಲೇಬೇಕು. ಆ ಬಂಡಿಗೆ ಇಂಧನ ಶ್ರಾವಣ. ಈ ಶ್ರಾವಣದ್ದು ಸಂಜೀವಿನಿ ಶಕ್ತಿ. ಈ ಮದ್ದಿನ ಮಾಯೆಯ ಕಾರಣದಿಂದಲೇ ಬೆಟ್ಟ ಗುಡ್ಡ ಬಯಲುಗಳಿಗೆ ಹಸಿರು ಸ್ಪರ್ಶ. ಮುಗಿಲಿನ ಮೋರೆಯಲ್ಲಿ ಮಿನುಗುವ ಸೋನೆ. ಪ್ರಕೃತಿಯಲ್ಲಿ ಸಂಭ್ರಮ ತುಂಬಿದಾಗ, ಆ ಸಡಗರ ಹಬ್ಬಗಳ ರೂಪದಲ್ಲಿ ಮನೆಮನಗಳಲ್ಲಿ ತುಳುಕದಿದ್ದೀತೆ? ಶ್ರಾವಣ ಸಂಭ್ರಮಕ್ಕೆ ಮುನ್ನುಡಿಯ ರೂಪದಲ್ಲಿ 'ಸುಧಾ' ಬಳಗದಿಂದ ಅಕ್ಷರ ತೋರಣ.

